491

ಕಡೂರು ಡಿಸ್ಟ್ರಿಕ್ಟ್.

22ನೇ ಏಪ್ರೆಲ್ 1895.

ಪ್ರಕಟನೆ.

ಈ ಕೆಳಗೆ ರುಜು ಮಾಡಿರುವವರ ತಂದೆ ಮೈಸೂರು ಹಳೆ ನರಸಪ್ಪನವರ ಮಕ್ಕಳು ಮಧ್ವರಾಯರಿಗೆ ಹುಚ್ಚು ಹಿಡಿದಿರುವ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರಿಂದ ಕಡೂರು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರ ದ್ವಾರಾ ತಲ್ಪಿರುವ 1893ನೇ ಇಸವಿ ನವಂಬರ್ 8ನೇ ಮಕ್ಕಂ 771ನೇ ನಂಬರ್ ಲೆಟರ್ ತಲ್ಪಿರುವದ್ದರಿಂದ ಇವರ ಬಾಬತು ಸ್ಥಿರ ಆಸ್ತಿಗಳು ಅಂದರೆ ಮೈಸೂರು ಡಿಸ್ಟ್ರಿಕ್ಟ್ ತಿರುಮಕೂಡ್ಲು ನರಸೀಪುರ ತಾಲ್ಲೂಕು ರಂಗಸಮುದ್ರದ ಹೋಬಳಿ ಕಸಬಾ ರಂಗಸಮುದ್ರದಲ್ಲಿರುವ ತರೀ ಜಮೀನು ಸರ್ವೆ ನಂಬರು 124 ಮತ್ತು ಮೈಸೂರು ಕಿಲ್ಲೆ ವೀಣೆ ವೆಂಕಟಸುಬ್ಬಯ್ಯನವರ ಗಲ್ಲಿಯಲ್ಲಿರುವ ಹಂಚಿನ ಮನೆ ಮ್ಯುನಿಸಿಪಲ್ ನಂಬರ್ ಇವುಗಳ ಬಾಬತು ಅಡವು, ಭೋಗ್ಯ, ಮತ್ತು ಕ್ರಯ ಇವೇ ಮುಂತಾದವುಗಳನ್ನು ಮಾಡಿಕೊಳ್ಳುವವರಿಗೆ ತತ್ಸಂಬಂಧವಾದ ಹಕ್ಕುಗಳು ವೂರ್ಜಿತವಾಗಲಾರದೆಂಬದಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸಿದೆ.

ಎ. ಕೃಷ್ಣರಾವ್,
ಡಿಪ್ಯೂಟಿ ಇನ್‌ಸ್ಪೆಕ್ಟರ್ ಆಫ್ ವ್ಯಾಕ್ಸಿನೇಷನ್.